**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 05.02.2026**

**ಪಾಟೀ ಸವಾಲುಃ ಕೆ ಎಸ್ ಎಂ ವಕೀಲರಿಂದಃ**

1. ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೆನೆ. ಕನ್ನಡವನ್ನು ನನಗೆ ಓದಲು ಮತ್ತು ಬರೆಯಲು ಬರುತ್ತದೆ. ವಂಶವೃಕ್ಷವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನಿಮ್ಮ ಕುಟಂಬದ ವಂಶವೃಕ್ಷವನ್ನು ತಾಲ್ಲೂಕು ಕಚೇರಿಯಿಂದ ಪಡೆದು ಸಲ್ಲಿಸಲು ತೊಂದರೆ ಇಲ್ಲ. ಮರಲಿಂಗ ಉರುಫ್ ಬುಡ್ಡಯ್ಯ ಎಂಬುವವರ ವಾರಸುದಾರರ ಬಗ್ಗೆ ಪೂರ್ಣ ಮಾಹಿತಿ ನಿಮಗಿದೆ ಎಂದರೆ ಸರಿ. ಮರಲಿಂಗ ಉರುಫ್ ಬುಡ್ಡಯ್ಯ ಎಂಬುವವರಿಗೆ ದೊಡ್ಡಹೈದ ಎನ್ನುವ ಒಬ್ಬ ಮಗ ಇದ್ದಾನೆ. ದೊಡ್ಡಹೈದ ನಿಮಗೇನಾಗಬೇಕು ಎಂದರೆ ಸಾಕ್ಷಿ ಮುತ್ತಾತ ಎಂದು ಹೇಳುತ್ತಾರೆ. ದೊಡ್ಡೈದನ ಹೆಂಡತಿ ಹೆಸರು ನಿಂಗಮ್ಮ. ನಿಂಗಮ್ಮನವರು ಈಗ ಜೀವಂತ ಇಲ್ಲ. ನಿಮ್ಮ ವಂಶವೃಕ್ಷದಲ್ಲಿ ದೊಡ್ಡಹೈದನ ಹೆಸರು ನಮೂದು ಮಾಡಿಲ್ಲ ಎಂದರೆ ಸರಿ. ದೊಡ್ಡೆಹೈದನಿಗೆ ಒಟ್ಟು ನಾಲ್ಕು ಜನ ಮಕ್ಕಳು. ಲಿಂಗೇಗೌಡ, ಕುಳ್ಳೇಗೌಡ, ಪಾಪೇಗೌಡ ಮತ್ತು ಮರಿಲಿಂಗೇಗೌಡ. ಈ ನಾಲ್ಕು ಜನ ಮಕ್ಕಳು ಹಾಗೂ ಅವರ ಹೆಂಡತಿಯರುಗಳು ಈಗ ಜೀವಂತ ಇಲ್ಲ. ಲಿಂಗೇಗೌಡರಿಗೆ ಮೂರು ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು. ಮೊದಲನೆ ಜೆ ಲಿಂಗಯ್ಯ, ಚಿಕ್ಕಚನ್ನೇಗೌಡ ಮತ್ತು ದೊಳ್ಳೇಗೌಡ, ಸಣ್ಣಮ್ಮ ಮತ್ತು ಚಿಕ್ಕತಾಯಮ್ಮ. ಲಿಂಗೇಗೌಡರಿಗೆ ನಿಂಗಮ್ಮ ಎನ್ನುವ ಮತ್ತೂಬ್ಬ ಮಗಳು ಇದ್ದರು ಎಂದರೆ

ಸಾಕ್ಷಿ ಗೊತ್ತಿಲ್ಲವೆಂದು ಹೇಳುತ್ತಾರೆ. ಲಿಂಗೇಗೌಡರ ಮಕ್ಕಳುಗಳ ಪೈಕಿ ಮೂರು ಜನ ಮಕ್ಕಳುಗಳು ಸತ್ತು ಹೋಗಿದ್ದಾರೆ ಹಾಗೂ ಹೆಣ್ಣುಮಗಳು ಸಣ್ಣಮ್ಮ ಮೃತರಾಗಿದ್ದಾರೆ,. ಲಿಂಗಮ್ಮ ಎನ್ನುವ ಮಗಳು ಸಹ ಮೃತರಾಗಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.  ಚಿಕ್ಕತಾಯಮ್ಮನವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

2. ಸಣ್ಣಮ್ಮನವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಂದು ಹೆಣ್ಣು ಮಗಳು. ಸಣ್ಣಮ್ಮನವರು ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ತೀರಿಹೋಗಿದ್ದರು ಎಂದರೆ ಸರಿ. ಸಣ್ಣಮ್ಮನವರ ಮಕ್ಕಳುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಿಂಗಮ್ಮನವರ ವಾರಸುದಾರರನ್ನು ಈದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

3. ಕುಳ್ಳೇಗೌಡರಿಗೆ ಮೂರು ಜನ ಮಕ್ಕಳು. ಕೆ ಬೊಮ್ಮರಸೇಗೌಡ, ತಮ್ಮೇಗೌಡ ಮತ್ತು ನಿಂಗಮ್ಮ. ನಿಂಗಮ್ಮ ಈಗ ಜೀವಂತ ಇಲ್ಲ. ನಿಂಗಮ್ಮನವರಿಗೆ ಒಟ್ಟು ಆರು ಜನ ಮಕ್ಕಳು. ನಿಂಗಮ್ಮನವರ ಮಕ್ಕಳುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 1 ರಿಂದ 4 ನೇ ವಾದಿಗಳು ತಮ್ಮೇಗೌಡರ ಮಕ್ಕಳು ಎಂದರೆ ಸರಿ. ನಿಮ್ಮ ತಂದೆಗೆ ಒಟ್ಟು ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ ಒಟ್ಟು ನಾಲ್ಕು ಜನ ಮಕ್ಕಳು ಅವರುಗಳೆಂದರೆ ರಾಮಕೃಷ್ಣ, ಧರ್ಮ, ಪಾಪಾಣ್ಣ ಮತ್ತು ಲೋಕೇಶ, ಹಾಗೂ ಇಬ್ಬರು ಹೆಣ್ಣುಮಕ್ಕಳು ಭಾಗ್ಯ

ಮತ್ತು ಕೋಮಲ. ಭಾಗ್ಯ ಮತ್ತು ಕೋಮಲ ಈಗಲೂ ಬದುಕಿದ್ದಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ 6 ಮತ್ತು 7 ಎಂದು ಮಾಡಿದ್ದೇವೆಂದು ಹೇಳುತ್ತಾರೆ. ನಿಮ್ಮ ಸಹೋದರಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ  ಎಂದರೆ ಸರಿ. ನಮ್ಮ ತಂದೆಗೆ ಇಬ್ಬರು ಹೆಂಡತಿಯರು.  ದೇವಮ್ಮ ಮತ್ತು ಜಯಮ್ಮ. ಜಯಮ್ಮನವರು ತೀರಿ ಹೋಗಿದ್ದಾರೆ. ದೇವಮ್ಮನವರಿಗೆ ಒಬ್ಬ ಮಗಳು ಅವರ ಹೆಸರು ಕವಿತಾ.  ದೇವಮ್ಮ ಮತ್ತು ಅವರ ಮಗಳು ಕವಿತಾರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

4. ಬೊಮ್ಮರಸೇಗೌಡರಿಗೆ 3 ಗಂಡು ಮತ್ತು ನಾಲ್ಕು ಹೆಣ್ಣುಮಕ್ಕಳು. ಹೆಣ್ಣುಮಕ್ಕಳ ಹೆಸರು ಪ್ರೇಮ, ಸರೋಜ, ಸವಿತಾ ಮತ್ತು ರತ್ನ. ಮರಿಲಿಂಗೇಗೌಡರಿಗೆ ಇಬ್ಬರು ಗಂಡು ಮತ್ತು ಒಬ್ಬರು ಹೆಣ್ಣುಮಗಳು.  1 ನೇ ಪ್ರತಿವಾದಿಯ ಸಹೋದರಿ ಹೆಸರು ಗೌರಮ್ಮ ಅವರು ಈಗಲೂ ಬದುಕಿದ್ದಾರೆ. ಗೌರಮ್ಮನವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳ ತಂದೆ ತೀರಿ ಹೋಗಿದ್ದಾರೆಂದರೆ ಸರಿ. ಲಿಂಗೇಗೌಡರಿಗೆ ಇಬ್ಬರು ಗಂಡು ಮತ್ತು ಒಂದು ಹೆಣ್ಣುಮಗಳು. ಲಿಂಗೇಗೌಡರ ಮಗಳ ಹೆಸರು ಮಮತಾ. ಮಮತಾರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಲಿಂಗೇಗೌಡರ ಹೆಂಡತಿ ಈಗ ಜೀವಂತ ಇಲ್ಲ.

5. ದೊಡ್ಡಹೈದೇಗೌಡರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು. ದೊಡ್ಡಹೈದೇಗೌಡರಿಗೆ ನಾಲ್ಕು ಜನ ಹೆಣ್ಣುಮಕ್ಕಳು ಎಂದರೆ ಸರಿ. ಪುಟ್ಟಮ್ಮ, ಶಾಂತಮ್ಮ, ಜಯಲಿಂಗಮ್ಮ ವತ್ತು ಗೌರಮ್ಮ ಎಂದರೆ ಸರಿ, ಈ 4 ಹೆಣುಮಕ್ಕಳು ಈಗಲೂ ಬದುಕಿದ್ದಾರೆ ಎಂದರೆ ಸರಿ. ಈ ನಾಲ್ಕು ಜನ ಹೆಣ್ಣುಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

**ಈ ಹಂತದಲ್ಲಿ ಸಾಕ್ಷಿಯ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.**

**ಓ ಹೇ ಕೇ ಸ ಇ ಒ**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.**